**ಕರ್ನಾಟಕ ಸರ್ಕಾರ**

ಗ್ರಾಅಪ 21 ಜೈಅಯೋ 2012

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, **ದಿನಾಂಕ 20.02.2013**

**ಇವರಿಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃಧ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ :**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ತುಮಕೂರು, ಶಿವಮೊಗ್ಗ, ಹಾಸನ,
ಉಡುಪಿ, ದಾವಣಗೆರೆ, ದಕ್ಷಿಣ ಕನ್ನಡ, ಬೆಂಗಳೂರು(ನಗರ),
ಗದಗ, ಕೊಪ್ಪಳ, ಮೈಸೂರು ಮತ್ತು ರಾಯಚೂರು

ಮಾನ್ಯರೇ,

ವಿಷಯ: 2012-13ನೇ ಸಾಲಿಗೆ ರಾಷ್ಟ್ರೀಯ ಜೈವಾನಿಲ ಕಾರ್ಯಕ್ರಮದಡಿ ಭೌತಿಕ ಗುರಿಯನ್ನು ಪರಿಷ್ಕರಿಸಿ ಹಂಚಿಕೆ ಮಾಡುವ ಕುರಿತು

ಉಲ್ಲೇಖ:
1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು, ಶಿವಮೊಗ್ಗ ಹಾಸನ, ಉಡುಪಿ, ದಾವಣಗೆರೆ ಮತ್ತು ದಕ್ಷಿಣ ಕನ್ನಡ
2. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 21 ಜೈಅಯೋ 2012 ದಿನಾಂಕ 21.07.2012 ಮತ್ತು 14.09.2012
3. ಎಂಎನ್ಆರ್ಇ ಪತ್ರ ಸಂಖ್ಯೆ: 5-1/2012-ಬಿಇ ದಿನಾಂಕ 09.07.2012

2012-13ನೇ ಸಾಲಿಗೆ ಕೇಂದ್ರ ಸರ್ಕಾರವು ರಾಷ್ಟ್ರೀಯ ಜೈವಾನಿಲ ಅಭಿವೃಧ್ಧಿ ಕಾರ್ಯಕ್ರಮದಡಿ ನಿಗದಿ ಪಡಿಸಿದ ಭೌತಿಕ ಗುರಿಯನ್ನು ಈಗಾಗಲೇ ನಾಲ್ಕು ತ್ರೈಮಾಸಿಕಗಳಲ್ಲಿ ಜಿಲ್ಲಾ ಪಂಚಾಯತ್‌ಗಳಿಗೆ ಹಂಚಿಕೆ ಮಾಡಲಾಗಿದೆ.

ಉಲ್ಲೇಖಿತ(1)ರ ಪತ್ರಗಳನ್ನು ಪರಿಶೀಲಿಸಲಾಗಿದ್ದು, ಉಡುಪಿ, ದಾವಣಗೆರೆ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ಗಳು ನಿಗದಿ ಪಡಿಸಿದ ಗುರಿಗಿಂತ ಹೆಚ್ಚಿನ ಪ್ರಗತಿಯನ್ನು (ನಿರ್ಮಾಣ ಹಂತದಲ್ಲಿರುವ ಸ್ಥಾವರಗಳ ಸಂಖ್ಯೆಯನ್ನೊಳಗೊಂಡಂತೆ) ಸರ್ಕಾರದ ಪೂರ್ವಾನುಮತಿ ಪಡೆಯದೇ ನಿರ್ಮಿಸಲಾಗಿದೆ. ಕಾರ್ಯಕ್ರಮದ ಅನುಷ್ಠಾನದ ಹಿತದೃಷ್ಟಿಯಿಂದ ಮೇಲಿನ ಮೂರು ಜಿಲ್ಲೆಗಳಲ್ಲಿ ಡಿಸೆಂಬರ್ 2012ರ ಪ್ರಗತಿ ವರದಿಯಲ್ಲಿ ನಮೂದಿಸಿದ ಒಟ್ಟಾರೆ ಪ್ರಗತಿಯನ್ನು (ನಿರ್ಮಾಣ ಹಂತದಲ್ಲಿರುವ ಸ್ಥಾವರಗಳನ್ನು ಒಳಗೊಂಡಂತೆ) ಪರಿಗಣಿಸಿಲಾಗಿದ್ದು, ಮಾರ್ಚ್ 2013ರೊಳಗೆ ಪೂರ್ಣ ಪ್ರಗತಿಯನ್ನು ಸಾಧಿಸುವುದು. ಹಾಗೂ ಇನ್ನು ಮುಂದೆ ಕಾರ್ಯಕ್ರಮದ ಮಾರ್ಗಸೂಚಿಯಲ್ಲಿನ ಅಂಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

2012-13ನೇ ಸಾಲಿನಲ್ಲಿ ಕಡಿಮೆ ಪ್ರಗತಿ ಸಾಧಿಸಿದ ಜಿಲ್ಲಾ ಪಂಚಾಯತ್‌ಗಳಿಂದ ಭೌತಿಕ ಗುರಿಯನ್ನು ಹಿಂಪಡೆದು, ಹೆಚ್ಚುವರಿ ಭೌತಿಕ ಗುರಿಯ ಬೇಡಿಕೆ ಕೋರಿರುವ ತುಮಕೂರು, ಶಿವಮೊಗ್ಗ ಮತ್ತು ಹಾಸನ ಜಿಲ್ಲಾ ಪಂಚಾಯತ್‌ಗಳಿಗೆ ಈ ಕೆಳಕಂಡಂತೆ ಭೌತಿಕ ಗುರಿಯನ್ನು ಪರಿಷ್ಕರಿಸಿ ಮರು ಹಂಚಿಕೆ ಮಾಡಲಾಗಿದೆ.

| ಕ್ರ.ಸಂ. | ಜಿಲ್ಲಾ ಪಂಚಾಯತ್ | ನಿಗದಿ ಪಡಿಸಿದ ಭೌತಿಕ ಗುರಿ | ಹಿಂಪಡೆದ ಭೌತಿಕ ಗುರಿ | ಮರುಹಂಚಿಕೆ ಮಾಡಲಾದ ಭೌತಿಕ ಗುರಿ | ಪರಿಷ್ಕರಿಸಿದ ಒಟ್ಟು ವಾರ್ಷಿಕ ಗುರಿ |
|---|---|---|---|---|---|
| 1 | ಬೆಂಗಳೂರು(ನಗರ) | 345 | 223 | 0 | 122 |
| 2 | ಗದಗ | 150 | 100 | 0 | 50 |
| 3 | ಕೊಪ್ಪಳ | 327 | 227 | 0 | 100 |
| 4 | ಮೈಸೂರು | 690 | 250 | 0 | 440 |
| 5 | ರಾಯಚೂರು | 345 | 250 | 0 | 95 |
| | **ಒಟ್ಟು** | **1857** | **1050** | **0** | **807** |
| 6 | ತುಮಕೂರು | 410 | 0 | 300 | 710 |
| 7 | ಶಿವಮೊಗ್ಗ | 1000 | 0 | 500 | 1500 |
| 8 | ಹಾಸನ | 750 | 0 | 250 | 1000 |
| | **ಒಟ್ಟು** | **2160** | **0** | **1050** | **3210** |

(ಪರಿಷ್ಕರಿಸಿ ನಿಗದಿಪಡಿಸಲಾದ ವಾರ್ಷಿಕ ಗುರಿಯಲ್ಲಿ ಶೇ.5ರಷ್ಟು ಗುರಿಯನ್ನು SC Comp. ರಡಿ ಪರಿಗಣಿಸುವುದು)

ತಮ್ಮ ವಿಶ್ವಾಸಿ,

22/2/13

(ಎಂ.ದೀಪಾ)
ನಿರ್ದೇಶಕರು(ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ